ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1222 (193)

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಉತ್ತರಿಸುವ ದಿನಾಂಕ : 16.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬಿಡದಿ ಬಳಿ ಇರುವ ಟೊಯೋಟೊ ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು;	ಟೊಯೋಟೊ ಕಿರ್ಲೋಸ್ಕರ್ ಪ್ರೈ. ಲಿ., ಕಾರ್ಖಾನೆಯಲ್ಲಿ ಒಟ್ಟು 5,221 ಕಾರ್ಮಿಕರು / ನೌಕರರು ಕಾರ್ಯನಿರ್ವಹಿಸುತ್ತಿರುತ್ತಾರೆ.
ಆ	ಕಾರ್ಖಾನೆಯು ಬಂದ್ ಆಗಿದೆಯೇ ಯಾವ ಉದ್ದೇಶಕ್ಕಾಗಿ ಕಾರ್ಖಾನೆ ಬಂದ್ ಆಗಿರುತ್ತದೆ; ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾರೆಯೇ;	ಕಾರ್ಖಾನೆಯು ಬಂದ್ ಆಗಿರುವುದಿಲ್ಲ. ಆದರೆ ಕಾರ್ಮಿಕರು ಹಲವಾರು ಕಾರಣಗಳನ್ನು ಮುಂದಿಟ್ಟುಕೊಂಡು ಮುಷ್ಕರ ನಡೆಸಿದ್ದರು.
ಇ	ಕಾರ್ಖಾನೆಯನ್ನು ಪುನರ್ ಆರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ದಿನಾಂಕ 09.11.2020 ರಿಂದ ಕಾರ್ಮಿಕರು ಹೂಡಿದ ಹಠಾತ್ ಮುಷ್ಕರ ಹಾಗೂ ಪ್ರತಿಯಾಗಿ ಆಡಳಿತವರ್ಗದವರು ದಿನಾಂಕ 10.11.2020 ರಂದು ಕಾರ್ಖಾನೆಗೆ ಲಾಕ್‌ಔಟ್ ಘೋಷಿಸಿದ ವಿವಾದದ ಬಗ್ಗೆ ಸರ್ಕಾರ ಹಲವಾರು ಸಂದಾನ ಸಭೆಗಳನ್ನು ನಡೆಸಿ, ಕಾರ್ಮಿಕರು ಹೂಡಿದ ಮುಷ್ಕರ ಹಾಗೂ ಆಡಳಿತ ವರ್ಗದವರು ಕಾರ್ಖಾನೆಗೆ ಘೋಷಿಸಿದ ಲಾಕ್‌ಔಟ್ ಅನ್ನು ನಿಷೇಧಿಸಿ ಸರ್ಕಾರದ ಆದೇಶ ಸಂಖ್ಯೆ: ಕಾಇ 411 ಐಡಿಎಂ 2020, ದಿನಾಂಕ 18.11.2020ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ವಿವಾದವನ್ನು ನ್ಯಾಯ ನಿರ್ಣಯಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ ಕಾಇ 411 ಐಡಿಎಂ 2020, ದಿನಾಂಕ 19.11.2020ರಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ ಇಲ್ಲಿಗೆ ಕಳುಹಿಸಲು ಆದೇಶ ಹೊರಡಿಸಲಾಗಿರುತ್ತದೆ. ಲಾಕ್‌ಔಟ್ ಕಾನೂನು ಬಾಹಿರವೆಂದು ಸರ್ಕಾರವು ಘೋಷಿಸಿದ ನಂತರ ದಿನಾಂಕ 20.11.2020 ರಿಂದ ಕಾರ್ಖಾನೆಯು ಲಾಕ್‌ಔಟ್ ತೆರವುಗೊಳಿಸಿದ್ದರೂ ಸಹ ನಿಶ್ಚಿತ ಕಾರ್ಮಿಕರು ಕೆಲಸಕ್ಕೆ ಹಾಜರಾಗದೇ ಇದ್ದುದರಿಂದ ದಿನಾಂಕ 23.11.2020 ರಂದು ಆಡಳಿತವರ್ಗವು ಮತ್ತೊಮ್ಮೆ ಲಾಕ್‌ಔಟ್ ಘೋಷಿಸಲಾಗಿತ್ತು.

		ಆದಾಗ್ಯೂ ಕಾರ್ಮಿಕರು ವೈಯಕ್ತಿಕ ವಾಗ್ದಾನ ಪತ್ರವನ್ನು ಬರೆದುಕೊಟ್ಟಲ್ಲಿ, ಕೆಲಸಕ್ಕೆ ಹಾಜರಾಗಲು ಅವಕಾಶ ಮಾಡಿಕೊಡಲಾಗಿತ್ತು. ಸರ್ಕಾರದ ಮಟ್ಟದಲ್ಲಿ ಹಲವಾರು ಸುತ್ತಿನ ಮಾತುಕತೆಯನ್ನು ಉಭಯಪಕ್ಷಗಳೊಂದಿಗೆ ನಡೆಸಿ ಕಾರ್ಮಿಕರು ಪುನಃ ಕೆಲಸಕ್ಕೆ ಹಾಜರಾಗಬೇಕಿದ್ದಲ್ಲಿ ವೈಯಕ್ತಿಕ ವಾಗ್ದಾನ ಬರೆದುಕೊಡಬೇಕೆಂಬ ಆಡಳಿತ ವರ್ಗದ ನಿಯಮವನ್ನು ಸಡಿಲಿಸಿ, ಕಾರ್ಮಿಕ ಸಂಘವು ಸರ್ಕಾರಕ್ಕೆ ವಾಗ್ದಾನ ಬರೆದುಕೊಟ್ಟಲ್ಲಿ ಅದನ್ನು ಆಡಳಿತ ವರ್ಗದವರು ಅಂಗೀಕರಿಸುವುದಾಗಿ ತಿಳಿಸಿದ್ದರು. ಅದರಂತೆ, ದಿನಾಂಕ 01.03.2021 ರಂದು ಕಾರ್ಮಿಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಸರ್ಕಾರಕ್ಕೆ ಬರೆದುಕೊಟ್ಟ ವಾಗ್ದಾನ ಪತ್ರವನ್ನು ಆಡಳಿತ ವರ್ಗಕ್ಕೆ ಕಳುಹಿಸಿಕೊಟ್ಟು ಕಾರ್ಮಿಕ ಸಂಘದ ಮನವಿಯನ್ನು ಪುರಸ್ಕರಿಸಲು ಕಳುಹಿಸಿಕೊಡಲಾಗಿತ್ತು. ಸರ್ಕಾರದ ಪತ್ರವನ್ನು ಆಡಳಿತ ವರ್ಗದವರು ಪುರಸ್ಕರಿಸಿ, ಎಲ್ಲಾ ಕಾರ್ಮಿಕರು (ಅಮಾನತ್ತುಗೊಂಡಿರುವ ಕಾರ್ಮಿಕರನ್ನು ಹೊರತುಪಡಿಸಿ) ಕೆಲಸಕ್ಕೆ ಹಾಜರಾಗಲು ಅವಕಾಶ ಮಾಡಿಕೊಟ್ಟಿರುತ್ತಾರೆ ಹಾಗೂ ಪ್ರಸ್ತುತ ಕಾರ್ಖಾನೆಯಲ್ಲಿ ಕೈಗಾರಿಕಾ ಶಾಂತಿ ನೆಲೆಸಿದೆ.

ಸಿಐ 103 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು